# ಕಬಡ್ಡಿ: ಹಾಸನದ ಮಲ್ನಾಡ್ ಕಾಲೇಜ್‌ಗೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನದ ಮಲ್ನಾಡ್ ಎಂಜಿನಿಯರಿಂಗ್ ಕಾಲೇಜು ತಂಡದವರು ಸೋಮವಾರ ಆನೇಕಲ್‌ನಲ್ಲಿ ಆರಂಭವಾದ 'ಶಿರಡಿ ಸಾಯಿ ತಾಂತ್ರಿಕ ಮಹಾವಿದ್ಯಾಲಯ' ಆಶ್ರಯದ ವಿಟಿಯು ಅಂತರ ಎಂಜಿನಿಯರಿಂಗ್ ಕಾಲೇಜು ಕಬಡ್ಡಿ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಜಯಗಳಿಸಿದರು.

ಕಾಲೇಜು ಕ್ರೀಡಾಂಗಣದಲ್ಲಿ ನಡೆದ ರೋಮಾಂಚಕ ಪಂದ್ಯದಲ್ಲಿ ಮಲ್ನಾಡ್ ಕಾಲೇಜು ತಂಡದವರು 37-31 ಪಾಯಿಂಟ್‌ಗಳಿಂದ ಶ್ರವಣಬೆಳಗೊಳದ ಬಾಹುಬಲಿ ಕಾಲೇಜ್ ಆಫ್ ಎಂಜಿನಿಯರಿಂಗ್ ತಂಡವನ್ನು ಸೋಲಿಸಿದರು. ಮತ್ತೊಂದು ಪಂದ್ಯದಲ್ಲಿ ಆತಿಥೇಯ ಶಿರಡಿ ಸಾಯಿ ತಾಂತ್ರಿಕ ಮಹಾವಿದ್ಯಾಲಯ ತಂಡದವರು 53-31 ಪಾಯಿಂಟ್‌ಗಳಿಂದ ಹುಬ್ಬಳ್ಳಿಯ ಬಿವಿಬಿ ಕಾಲೇಜು ತಂಡದ ಮೇಲೆ ಜಯಗಳಿಸಿದರು.

ಇತರೆ ಪಂದ್ಯಗಳಲ್ಲಿ ಮಂಡ್ಯದ ಪಿಇಎಸ್ ಕಾಲೇಜು ತಂಡದವರು 46-13ರಲ್ಲಿ ಬದಾಲುರದ ಬಿಇಟಿ ತಂಡದ ಮೇಲೂ, ಬಾಗಲಕೋಟೆಯ ಬಿಇಸಿ ತಂಡದವರು 40-26ರಲ್ಲಿ ಸುಳ್ಯದ ಕುರುಂಜಿ ವೆಂಕಟರಮಣ ಗೌಡ ಎಂಜಿನಿಯರಿಂಗ್ ಕಾಲೇಜು ತಂಡವನ್ನು ಸೋಲಿಸಿದರು.



ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆನೇಕಲ್‌ನ ಶಿರಡಿ ಸಾಯಿ ಎಂಜಿನಿಯರಿಂಗ್ ಕಾಲೇಜು ಆಶ್ರಯದಲ್ಲಿ ಮಂಗಳವಾರ ಮುಕ್ತಾಯವಾದ ವಿಟಿಯು ಅಂತರ ಎಂಜಿನಿಯರಿಂಗ್ ಕಾಲೇಜು ಕಬಡ್ಡಿ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡ ಮಂಡ್ಯದ ಪಿಇಎಸ್ ಕಾಲೇಜು ತಂಡ.

ಕಾಲೇಜು ಕಬಡ್ಡಿ

# ಮಂಡ್ಯದ ಪಿಇಎಸ್‌ಗೆ ಪ್ರಶಸ್ತಿ

ಬೆಂಗಳೂರು: ಮಂಡ್ಯದ ಪಿಇಎಸ್ ಕಾಲೇಜು ತಂಡದವರು ಮಂಗಳವಾರ ಆನೇಕಲ್‌ನಲ್ಲಿ ಮುಕ್ತಾಯವಾದ ಶಿರಡಿ ಸಾಯಿ ಎಂಜಿನಿಯರಿಂಗ್ ಕಾಲೇಜು ಆಶ್ರಯದ ವಿಟಿಯು ಅಂತರ ಎಂಜಿನಿಯರಿಂಗ್ ಕಾಲೇಜು ಕಬಡ್ಡಿ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಫೈನಲ್ ಪಂದ್ಯದಲ್ಲಿ ಮಂಡ್ಯದ ಪಿಇಎಸ್ ಎಂಜಿನಿಯರಿಂಗ್ ಕಾಲೇಜು ತಂಡದವರು 45-20 ಪಾಯಿಂಟ್‌ಗಳಿಂದ ಶಿರಡಿ ಸಾಯಿ ಎಂಜಿನಿಯರಿಂಗ್ ಕಾಲೇಜು ತಂಡವನ್ನು ಪರಾಭವಗೊಳಿಸಿದರು.

ಸೆಮಿಫೈನಲ್‌ನಲ್ಲಿ ಪಿಇಎಸ್ ತಂಡದವರು 74-58ರಲ್ಲಿ ಸುಳ್ಯದ ಕೆವಿಜಿ ಕಾಲೇಜು ತಂಡದ ಮೇಲೆ ವಿಜಯ ಸಾಧಿಸಿದರು.

ಶಿರಡಿ ಸಾಯಿ ಕಾಲೇಜು ತಂಡದವರು 50-43ರಲ್ಲಿ ಹಾಸನದ ಮಲ್ನಾಡ್ ಎಂಜಿನಿಯರಿಂಗ್ ಕಾಲೇಜು ವಿರುದ್ಧ ಗೆದ್ದು ಅಂತಿಮ ಹಣಾಹಣಿಯಲ್ಲಿ ಕಾಣಿಸಿಕೊಂಡರು.